## ಹಿಂದಿನ ಸಂಚಿಕೆಯಲ್ಲಿ...

**ಊರಿನ ಇತರ ಹುಡುಗರಿಗಿಂತ ತುಸು ಭಿನ್ನ ಈ ಸೂರಿ. ಕಾಲೇಜು ಮೆಟ್ಟಿಲು ಹತ್ತಿ ಸೊಗಸಾಗಿ ಇಂಗ್ಲಿಷ್ ಮಾತಾಡುತ್ತಿದ್ದ, ಊರ ಜನರ ಗೌರವ ಗಳಿಸಿದ್ದ. ತಾನಿದ್ದ ಐತಿಹಾಸಿಕ ಸ್ಥಳದಲ್ಲಿ ಗೈಡ್ ಆಗಿ ಉತ್ತಮ ಸಂಪಾದನೆಯೂ ಮಾಡುತ್ತಿದ್ದ. ಅಂದು ಊರ ನೋಡಲು ಬಂದ ಆಂಗ್ಲ ಬೆಡಗಿ ಜೋನಿ ಅವನ ಮನ ಸೆಳೆದಳು. ತನ್ನ ಭಾವಚಿತ್ರ ಕೊಟ್ಟು ಅವನ ಉಂಗುರ ಪಡೆದಳು. ಅವಳೊಡನೆ ದೇವಸ್ಥಾನಕ್ಕೆ ಹೋದ ಸೂರಿ, ಅವಳನ್ನು ಗಾಂಧರ್ವ ವಿವಾಹವಾದೆನೆಂದೇ ತಿಳಿದ...**

ಬೆಳಗಾದೊಡನೆ ಸೂರಿ ಸುಬ್ರಮಣ್ಣನ ಬಳಿ ಬಂದ. 'ನಿನ್ನಿಂದ ಒಂದು ಕೆಲಸವಾಗಬೇಕಾಗಿದೆ. ಒಂದು ಚಿತ್ರ ಬರೆದುಕೊಡಬೇಕು. ಎಷ್ಟು ದುಡ್ಡಾದರೂ ಚಿಂತಿಲ್ಲ' ಅಂದ. 'ಯಾರದ್ದು? ಲಕ್ಷ್ಮಿಯದೊ, ಸರಸ್ವತಿಯದೊ?' ಎಂದು ಕೇಳಿದ ಸುಬ್ಬು. 'ಬೇಕಾದರೆ ಎರಡೂ' ಅನ್ನುತ್ತ ಸೂರಿ ಪುಸ್ತಕದ ಮಧ್ಯದಿಂದ ಜೋನಳ ಚಿತ್ರವನ್ನು ತೆಗೆದುಕೊಟ್ಟ. ಅದನ್ನು ನೋಡಿದ ಒಡನೆಯೇ ಸುಬ್ಬುವಿಗೆ 'ಈ ಕೆಂಪುಕೋತಿಯನ್ನು ಎಲ್ಲೋ ನೋಡಿದ ಹಾಗಿದೆಯಲ್ಲ' ಎಂಬ ಕುತೂಹಲ, 'ಇವಳು ನಮ್ಮ ದೇಶದವಳಲ್ಲ, ಇವಳ ಚಿತ್ರ ಬಿಡಿಸಿ ಪಾಪ ಕಟ್ಟಿಕೋಬೇಕಲ್ಲ' ಎಂಬ ಜಿಗುಪ್ಸೆ. 'ಯಾರೋ ಇದು' ಅಂದ. ಸೂರಿ ಕ್ಷಣ ಸ್ಫೂರ್ತಿಯಿಂದ 'ನಮ್ಮ ಪ್ರಿನ್ಸಿಪಾಲ್ ಬ್ರೌನ್ ಸಾಹೇಬರ ಮಗಳು. ಕಣೋ. ಮೊನ್ನೆ ತೀರಿಕೊಂಡಳು. ಮಾಡಿಸಿ ಅವರಿಗೆ ಪ್ರೆಸೆಂಟ್ ಕೊಡೋಣ ಅಂತ' ಅಂದ. ಹಿಂದೆಯೇ 'ಮನಸ್ಸಿನಲ್ಲಿ ಜೋನಿಯನ್ನು ಸಾಯಿಸಿಬಿಟ್ಟೆನಲ್ಲ, ಎಂಥ ಪಾಪ ಮಾಡಿದೆ' ಎಂದು ಬೇಸರ ಮಾಡಿಕೊಂಡ. 'ಟ್ವೆಲ್ವ್ ಬೈ ಟೆನ್ ಸೈಜೇ ಆಗಲಿ, ಒಳ್ಳೆಯ ವಿಲಾಯಿತಿ ಬಣ್ಣ ಉಪಯೋಗಿಸು' ಎಂದನ್ನುತ್ತ ಸುಬ್ಬುವಿನ ಕೈಯಲ್ಲಿ ಐದು ರೂಪಾಯಿ ಇಟ್ಟ. ಸುಬ್ಬು ಯಾವುದೋ ದ್ವಂದ್ವದಲ್ಲಿ ಸಿಕ್ಕಿಬಿದ್ದವನಂತೆ ಇಷ್ಟವಿಲ್ಲದೆ ಆ ಕೆಲಸ ಒಪ್ಪಿಕೊಂಡ.

ಅಲ್ಲಿಂದ ಸೂರಿ ಪೋಸ್ಟ್ ಆಫೀಸಿಗೆ ಬಂದ. ಅದೇ ಹೊತ್ತಿಗೆ ಟಪಾಲುಪೇದೆ ಮಹದೇವ ಓಣಿ ಗಲ್ಲಿಗಳಂತೆ ಆವತ್ತಿನ ಟಪಾಲನ್ನು ಜೋಡಿಸಿ, ಕ್ಯಾರಿಯರ್‌ಗೆ ಕಟ್ಟಿ ಸೈಕಲ್ ಹತ್ತುವುದರಲ್ಲಿದ್ದ. ಸೂರಿ ಅವನನ್ನು ನಿಲ್ಲಿಸಿ, ಕೈಯಲ್ಲಿ ಎಂಟಾಣೆ ಇಟ್ಟು 'ನಾಳೆಯಿಂದ ದಿನಬಿಟ್ಟು ದಿನ ಕಾಗದ ಬರುತ್ತೆ. ವಿಳಾಸ ಬರೀ 'ಸೂರಿ ಎಸ್ಕ್ವೈರ್, ಗೈಡ್' ಅಂತ ಇರುತ್ತೆ. ವಿಳಾಸ ಪೂರ್ತಿ ಇಲ್ಲ ಅಂತ ವಾಪಸು ಕಳಿಸಿಬಿಟ್ಟೀಯೆ, ಹುಷಾರ್, ಕಾಗದ ಬಂದ ದಿನ ಮೊದಲು ನನಗೆ ಕೊಟ್ಟು, ಆಮೇಲೆ ಇತರ ಕಡೆ ಹೋಗೋದು ಇಟ್ಟುಕೊ' ಎಂದು ತಾಕೀತು ಮಾಡಿ, ಹಾಗೆಯೇ ಒಳಹೋಗಿ ಇಡೀ ಒಂದು ಕಟ್ಟು ಒಂದಾಣೆಯ ಕವರ್‌ಕೊಂಡ. ಅವನ ತರ್ಕ ಚಿತ್ರದ ಹಿಂದಿರುವ ಸ್ಟುಡಿಯೋ ವಿಳಾಸಕ್ಕೇ ಕೇರಾಫ್ ಹಾಕಿ ಬರೆದರೆ ಸರಿ, ತಲುಪೇ ತಲುಪುತ್ತೇ' ಎಂದಾಗಿತ್ತು.

ಮನೆಗೆ ಬರುವ ದಾರಿಯಲ್ಲಿ ವೈದ್ಯ ಗುಂಡೂ ಪಂಡಿತರು ಎದುರಾದರು. ಅವರನ್ನು ನೋಡಿದೊಡನೆಯೇ ಜೋನ್ 'ನೀನು ತುಂಬ ವೀಕ್ ಆಗಿ ಕಾಣುತ್ತಿ' ಅಂದದ್ದು ನೆನಪಾಯಿತು. ಆ ನಡು ಹಗಲ ಬಿಸಿಲಿನಲ್ಲಿ ಅವರ ಹರಕು ಛತ್ರಿಯ ಕೆಳಗೇ ನಿಂತು, ಅತ್ತ ಇತ್ತ ಯಾರೂ ಬರುತ್ತಿಲ್ಲವೆಂದು ಖಾತರಿ ಮಾಡಿಕೊಂಡು 'ಪಂಡಿತರೇ, ಒಂದು ಮಾತು, ಈಚೆಗೆ ತುಂಬ ವೀಕ್